# ಮೆಂಗ್: ಬಂಧನ ತಂದ ಜನಪ್ರಿಯತೆ



ಚೀನೀ ಹೆಸರನ್ನು ಕನ್ನಡದಲ್ಲಿ ಉಚ್ಚರಿಸುವುದು ಸ್ವಲ್ಪ ಕಷ್ಟವೇ. ಹ್ವಾವೆ (Huawei) ಎನ್ನುವುದನ್ನು ಇಂಗ್ಲಿಷಿನಲ್ಲಿ ಓದಿದರೆ ಮಾತ್ರ ಅದೊಂದು ಸಂಸ್ಥೆ ಎಂದು ಅರ್ಥವಾಗಬಹುದು. ದೂರಸಂಪರ್ಕ ಉಪಕರಣಗಳ ಉತ್ಪಾದನೆಯಲ್ಲಿ ವಿಶ್ವದಲ್ಲೇ ದೊಡ್ಡ ಹೆಸರು ಪಡೆದಿರುವ ಈ ಚೀನೀ ಬಹುರಾಷ್ಟ್ರೀಯ ಕಂಪನಿಯ ವೈಸ್ ಚೇರ್‌ಮನ್ / ಸಿಎಫ್‌ಓ ಮೆಂಗ್ ವಾನ್‌ಝೊ ಕೆನಡಾದಲ್ಲಿ ಪೊಲೀಸ್ ಬಂಧನಕ್ಕೆ ಒಳಗಾಗಿರುವುದು ವಿಶ್ವ ವ್ಯಾಪಾರ ವಲಯದಲ್ಲಿ ದೊಡ್ಡ ಸುದ್ದಿ. ನ್ಯೂಯಾರ್ಕ್‌ನ ಜಿಲ್ಲಾ ನ್ಯಾಯಾಲಯವೊಂದರಲ್ಲಿ ನಡೆಯುತ್ತಿರುವ ವ್ಯಾಜ್ಯದ ಹಿನ್ನೆಲೆಯಲ್ಲಿ ಅಮೆರಿಕದ ಟ್ರಂಪ್ ಸರ್ಕಾರದ ವಿನಂತಿಯಂತೆ ಕೆನಡಾ ಪೊಲೀಸರು ಈ ಬಂಧಿಸಿದ್ದಾರೆ. ಡಿಸೆಂಬರ್ 1ರಂದು ಬಂಧಿಸಿದ ಬಳಿಕ ಕೆನಡಾದ ನ್ಯಾಯಾಲಯದಲ್ಲಿ ವಿಚಾರಣೆ ನಡೆದು 11ರಂದು ಈಕೆಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. 70 ಲಕ್ಷ ಡಾಲರ್ ನಗದು ಠೇವಣಿ ಮತ್ತು 30 ಲಕ್ಷ ಡಾಲರ್ ಖಾತ್ರಿ ಆಧಾರದ ಮೇಲೆ ಜಾಮೀನು ನೀಡಲಾಗಿದೆ. ಬಿಡುಗಡೆಯಾದ ಬಳಿಕ ಮೆಂಗ್ ವಾನ್‌ಝೊ ಮೇಲೆ ಎಲೆಕ್ಟ್ರಾನಿಕ್ ಕಣ್ಗಾವಲಿನ ಷರತ್ತನ್ನೂ ವಿಧಿಸಲಾಗಿದೆ.

ಮೆಂಗ್ ವಾನ್‌ಝೊ ಸಾಮಾನ್ಯ ಹೆಣ್ಣುಮಗಳಲ್ಲ. ಹ್ವಾವೆ ಕಂಪನಿಯ ಸ್ಥಾಪಕ ರೆನ್ ಝೆಂಗ್‌ಫಿಯ ಮೊದಲ ಹೆಂಡತಿಯ ಮೊದಲ ಮಗಳು. ಅಂತರರಾಷ್ಟ್ರೀಯ ವಾಣಿಜ್ಯ ವಲಯದಲ್ಲಿ ಹಬ್ಬಿರುವ ಸುದ್ದಿಯಂತೆ ಈಕೆಯೇ ಕಂಪನಿಯ ಮುಂದಿನ ಒಡತಿ. ಈ ಕಂಪೆನಿಗೆ ಸದ್ಯ ನಾಲ್ವರು ಉಪಾಧ್ಯಕ್ಷರಿದ್ದಾರೆ. ‘ನಮ್ಮ ಕುಟುಂಬದಲ್ಲಿ ನನಗೆ ಪ್ರತಿಸ್ಪರ್ಧಿಗಳು ಯಾರೂ ಇಲ್ಲ. ನನ್ನಷ್ಟು ಬುದ್ಧಿವಂತರೂ ಇಲ್ಲ’ ಎಂದು ಇತ್ತೀಚೆಗೆ ಸಂದರ್ಶನವೊಂದರಲ್ಲಿ ಈಕೆ ಹೇಳಿದ್ದನ್ನೇ ನಂಬುವುದಾದರೆ, ಕಂಪನಿಯ ಮುಂದಿನ ಚೇರ್‌ಮನ್ ಈಕೆಯೇ. ಪೀಪಲ್ಸ್ ಲಿಬರೇಷನ್ ಆರ್ಮಿಯ ಮಾಜಿ ಎಂಜಿನಿಯರ್ ರೆನ್ ಝೆಂಗ್‌ಫಿ ಫೋನ್ ಸ್ವಿಚ್‌ಗಳನ್ನು ಉತ್ಪಾದಿಸಲು ಆರಂಭಿಸಿದ ಚೀನಾದ ಈ ಖಾಸಗಿ ಕಂಪನಿ, ಇವತ್ತು ದೂರಸಂಪರ್ಕ ಉಪಕರಣಗಳು ಮಾತ್ರವಲ್ಲ ಸ್ಮಾರ್ಟ್‌ಫೋನ್‌ಗಳ ಉತ್ಪಾದನೆಯಲ್ಲೂ ಮುಂಚೂಣಿಯಲ್ಲಿದೆ. 2012ರಲ್ಲೇ ಎರಿಕ್‌ಸನ್ ಕಂಪೆನಿಯನ್ನು ಹಿಂದಿಕ್ಕಿ ವಿಶ್ವದ ಅತಿದೊಡ್ಡ ದೂರಸಂಪರ್ಕ ಸಲಕರಣೆಗಳ ಉತ್ಪಾದಕನಾದ ಈ ಕಂಪನಿಯು, 2018ರಲ್ಲಿ ಆ್ಯಪಲ್ ಕಂಪನಿಯನ್ನು ಹಿಂದಿಕ್ಕಿ ಜಗತ್ತಿನ ಎರಡನೇ ಅತಿದೊಡ್ಡ ಸ್ಮಾರ್ಟ್‌ಫೋನ್ ಉತ್ಪಾದಕ ಕಂಪನಿಯಾಗಿದೆ. ಪ್ರಗತಿ ಈ ವೇಗದಲ್ಲೇ ಮುಂದುವರಿದರೆ ಸ್ಮಾರ್ಟ್‌ಫೋನ್ ಉತ್ಪಾದನೆಯಲ್ಲಿ ಈಗ ಮೊದಲ ಸ್ಥಾನದಲ್ಲಿರುವ ಸ್ಯಾಮ್‌ಸಂಗ್‌ಅನ್ನು ಹಿಂದಿಕ್ಕಬಹುದು. ಅದಕ್ಕೆ ತಕ್ಕಂತೆ ಈ ವರ್ಷ ಕಂಪನಿಯ ಆದಾಯ 100 ಶತಕೋಟಿ ಡಾಲರ್ ಮೀರುವ ನಿರೀಕ್ಷೆಯಿದೆ. ವಿಶ್ವದಾದ್ಯಂತ 1.80 ಲಕ್ಷ ಉದ್ಯೋಗಿಗಳನ್ನು ಹೊಂದಿರುವ ಹ್ವಾವೆ, ಅದರಲ್ಲಿ 76 ಲಕ್ಷ ಜನರನ್ನು ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡಿದೆ. ಭಾರತ, ಪಾಕಿಸ್ತಾನ, ಅಮೆರಿಕ, ಬ್ರಿಟನ್, ರಷ್ಯಾ, ಕೆನಡಾ, ಫ್ರಾನ್ಸ್ ಸಹಿತ ಹಲವು ದೇಶಗಳಲ್ಲಿ ಈ ಕಂಪನಿಯು 21 ಸಂಶೋಧನಾ ಕೇಂದ್ರಗಳನ್ನು ಹೊಂದಿದೆ. 2017ರಲ್ಲಿ ಈ ಸಂಸ್ಥೆ 13.8 ಶತಕೋಟಿ ಡಾಲರ್‌ಗಳನ್ನು ಸಂಶೋಧನೆಗೆ ಹೂಡಿದೆ ಎನ್ನುವುದು ದೊಡ್ಡ ಸುದ್ದಿ.

ಅಮೆರಿಕ ಸಹಿತ ಎಲ್ಲ ದೇಶಗಳಲ್ಲೂ ಎಲೆಕ್ಟ್ರಾನಿಕ್ ಉಪಕರಣಗಳ ದೊಡ್ಡ ಮಾರಾಟ ಜಾಲ ಹೊಂದಿರುವ ಈ ಕಂಪನಿಯ ಬಗ್ಗೆ ಅಮೆರಿಕದ ಟ್ರಂಪ್ ಸರ್ಕಾರಕ್ಕೆ ಹಲವು ಅನುಮಾನಗಳಿವೆ. ಚೀನಾ ದೇಶವು ಈ ಕಂಪನಿಯ ಉಪಕರಣಗಳ ಮೂಲಕ ಹಿಂಬಾಗಿಲಿನ ಕಣ್ಗಾವಲು ನಡೆಸುತ್ತಿದೆ ಎನ್ನುವುದು ಒಂದು ಅನುಮಾನ. ಅಮೆರಿಕದ ಕಂಪನಿಗಳನ್ನೇ ಹಿಂದಿಕ್ಕಿ ಹ್ವಾವೆ, ವ್ಯಾಪಾರದಲ್ಲಿ ಮುಂದುವರಿದಿರುವುದೂ ಟ್ರಂಪ್‌ಗೆ ಸಹಿಸಲಾಗದ ವಿಷಯವಾಗಿದೆ. ಹಾಗಾಗಿ ಈ ಕಂಪನಿಯನ್ನು ಬಗ್ಗುಬಡಿಯುವ ಉದ್ದೇಶವೂ ಅಮೆರಿಕಕ್ಕೆ ಇದ್ದಂತಿದೆ– ಎನ್ನುವುದು ಚೀನಾದ ವಾದ. ಮೆಂಗ್ ವಾನ್‌ಝೊ ಬಂಧನವನ್ನು ಗಂಭೀರವಾಗಿ ಪರಿಗಣಿಸಿದ ಚೀನಾ ಸರಕಾರ, ಪರಿಣಾಮದ ಬಗ್ಗೆ ತೀವ್ರ ಎಚ್ಚರಿಕೆ ನೀಡಿದ ಬಳಿಕ ಜಾಮೀನು ಬಿಡುಗಡೆ ಸಿಕ್ಕಿದೆ.

ಎಚ್‌ಎಸ್‌ಬಿಸಿ ಬ್ಯಾಂಕಿನಿಂದ ಹ್ವಾವೆ ಕಂಪನಿ ಪಡೆದ ದೊಡ್ಡ ಮೊತ್ತದ ಸಾಲವನ್ನು ಅದರ ಅಂಗಸಂಸ್ಥೆಯಾದ ಸ್ಕೈಕಾಮ್ ಟೆಕ್ ಬಳಸಿಕೊಂಡಿದೆ. ಸ್ಕೈಕಾಮ್ ಕಂಪನಿ ಇರಾನ್ ಜೊತೆಗೆ ವ್ಯಾಪಾರ ನಡೆಸುತ್ತಿದ್ದು, ಇದು ಅಮೆರಿಕದ ಇರಾನ್ ಆರ್ಥಿಕ ದಿಗ್ಬಂಧನ ನೀತಿಯ ಉಲ್ಲಂಘನೆ ಎನ್ನುವುದು ಅಮೆರಿಕದ ಸಿಟ್ಟಿಗೆ ಕಾರಣ. ಒಂದು ಸಂಸ್ಥೆಗೆ ಕೊಟ್ಟ ಬ್ಯಾಂಕ್ ಸಾಲವನ್ನು ಇನ್ನೊಂದು ಕಂಪನಿಗೆ ಬಳಸಿಕೊಂಡಿರುವುದು ವಂಚನೆ ಎನ್ನುವುದು ಮೆಂಗ್ ಮೇಲಿನ ಆರೋಪ. ಅಮೆರಿಕ– ಚೀನಾ ನಡುವಣ ವ್ಯಾಪಾರ ಸಮರದ ಒಂದು ದಾಳವಾಗಿ ಈ ಬಂಧನ ನಡೆದಿದೆ ಎನ್ನಲಾಗುತ್ತಿದೆ.

ಮೆಂಗ್ ವಾನ್‌ಝೊಗೆ ಸಬ್ರಿನಾ ಮೆಂಗ್ ಮತ್ತು ಕ್ಯಾಥಿ ಮೆಂಗ್ ಎಂಬ ಹೆಸರುಗಳೂ ಇವೆ. ಅಕೌಂಟಿಂಗ್ ವಿಷಯದಲ್ಲಿ ಮಾಸ್ಟರ್ಸ್ ಡಿಗ್ರಿ ಪಡೆದಿರುವ ಈಕೆ, ಚೀನಾ ಕನ್‌ಸ್ಟ್ರಕ್ಷನ್ ಕಂಪನಿಯಲ್ಲಿ ಒಂದು ವರ್ಷ ಕೆಲಸ ಮಾಡಿದ ಬಳಿಕ ಅಪ್ಪನ ಕಂಪನಿಗೆ ಸೆಕ್ರೆಟರಿಯಾಗಿ ಕೆಲಸಕ್ಕೆ ಸೇರಿದ್ದು. ಬಳಿಕ ಕಂಪನಿಯ ಹಣಕಾಸು ಇಲಾಖೆ, ಅಂತರರಾಷ್ಟ್ರೀಯ ಅಕೌಂಟ್ಸ್ ಹೆಡ್, ಹಾಂಕಾಂಗ್ ಅಕೌಂಟ್ಸ್ ಡೈರೆಕ್ಟರ್ ಮುಂತಾದ ಹುದ್ದೆಗಳನ್ನು ನಿಭಾಯಿಸಿ ಸಿಎಫ್‌ಓ ಆದವಳು. ಈ ವರ್ಷ ಕಂಪನಿಗೆ ನಾಲ್ವರು ಉಪಾಧ್ಯಕ್ಷರ ನೇಮಕವಾಗಿದ್ದು ಅದರಲ್ಲಿ ಮೆಂಗ್ ಹೆಸರೂ ಒಂದು. ಕಳೆದ ವರ್ಷ ಫೋರ್ಬ್ಸ್ ಪ್ರಕಟಿಸಿದ ಚೀನಾದ ಮುಂಚೂಣಿಯ ಬಿಸಿನೆಸ್‌ವುಮನ್‌ಗಳ ಪಟ್ಟಿಯಲ್ಲಿ ಈಕೆಯದ್ದು 8ನೇ ಸ್ಥಾನ. ಸದ್ಯಕ್ಕೆ ಜನಪ್ರಿಯತೆಯಲ್ಲಂತೂ ಮೊದಲ ಸ್ಥಾನ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65